ಹೇಳಬೇಕು', ನಾನು ಅಂತ್ಯವನ್ನು ಸೂಚಿಸಿದೆ.

'ಮೈಂಡ್ ಬ್ಲೋಯಿಂಗ್! ಇಷ್ಟು ಒಳ್ಳೆಯ ಅಂತ್ಯ ನನಗೇಕೆ ಹೊಳೆಯಲಿಲ್ಲ? ಇಂಥ ಅಂತ್ಯಕ್ಕೆ ಕಡೇ ಪಕ್ಷ ಪ್ರೇಕ್ಷಕರಿಗೆ ಕೊಳೆತ ಟೊಮ್ಯಾಟೊ ಮತ್ತು ಚಪ್ಪಲಿಗಳನ್ನು ಪ್ರಯೋಗಿಸುವ ಅವಕಾಶವಂತೂ ಲಭಿಸುವುದು', ವಿಶಾಲ್ ವ್ಯಂಗ್ಯದಿಂದ ಹೇಳಿದ, 'ಮೊದಲನೆಯದಾಗಿ ನನಗೆ ಇದಕ್ಕೆ ಪ್ರಾಯೋಜಕರು ಸಿಗಲ್ಲ, ಆಯೋಜಕರೂ ಸಿಗಲ್ಲ'.

'ನೀವು ತಪ್ಪಾಗಿ ಯೋಚಿಸುತ್ತಿದ್ದೀರ. ಈ ನಾಟಕ ಸಂಸ್ಕೃತಿಗೆ ವಿರುದ್ಧವಾಗಿದೆ ಎಂದು ಬಲವಾಗಿ ವಿರೋಧಿಸಬೇಕು, ಆಗ ನೋಡಿ, ಮೀಡಿಯಾದಲ್ಲಿ ನೀವು ಮತ್ತು ನಿಮ್ಮ ನಾಟಕ ರಾರಾಜಿಸುವುದು, ನೀವು ರಾತ್ರೋರಾತ್ರಿಯಲ್ಲಿ ಹೀರೋ ಆಗ್ತೀರ', ನಾನು ವಿಶಾಲನನ್ನು ಪ್ರೋತ್ಸಾಹಿಸಿದೆ. ಆದರೆ ಅವನು ನನ್ನ ಮಾತಿನಂತೆ ನಡೆಯುವುದಿಲ್ಲ, ನಾಟಕವೂ ಹೀಗಾಗುವುದಿಲ್ಲ, ಇದೆಲ್ಲಾ ತಮಾಷೆ ಎಂಬುದು ನನಗೆ ತಿಳಿದಿತ್ತು.

'ಐಡಿಯಾ ಕೆಟ್ಟದ್ದಾಗಿಲ್ಲ' ವಿಶಾಲ್ ಹೇಳಿದ, 'ಈ ನಾಟಕದ ನಾಯಕಿ ನೀವಾಗುವ ಬಗ್ಗೆ ನಿಮ್ಮ ಅಭಿಪ್ರಾಯವೇನು?'

'ಆಗ ನಿಮ್ಮ ಈ ನಾಟಕವನ್ನು ಯಾರೂ ಕಾಪಾಡಲು ಸಾಧ್ಯವಿಲ್ಲ', ನನಗೆ ನಗು ಬಂತು. ಹೀಗೆ ಅವನು ಸಾಮಾನ್ಯವಾಗಿ ನನ್ನ ಬಳಿ ಒಂದಲ್ಲ ಒಂದು ಕಥೆಯನ್ನು ಹೇಳುತ್ತಿದ್ದ. ನಾನು ಮನುಷ್ಯನ ವಿವಿಧ ಚಾರಿತ್ರ್ಯ ಮತ್ತು ಗುಣಗಳಿಗೆ ಸಮೀಪವಾಗುತ್ತಿದ್ದೆ. ವಿಶೇಷ ಸಂಗತಿ ಎಂದರೆ, ನಾನು ಅವೆಲ್ಲಾ ಗುಣಗಳನ್ನು ಆಧಾರವಾಗಿಟ್ಟುಕೊಂಡು ರಿತಿಕ್, ಖುಷಭ್ ಮತ್ತು ವಿಶಾಲನನ್ನು ಅಳೆಯುತ್ತಿದ್ದೆ. ರಿತಿಕ್‌ನ ತೂಕದ ತಟ್ಟೆಯೇ ಭಾರವಾಗುತ್ತಿತ್ತು. ಬಹುಶಃ ನಾನು ಅವನನ್ನು ಅತಿ ಹೆಚ್ಚು ಅರಿತಿದ್ದು ಇದಕ್ಕೆ ಕಾರಣವಾಗಿರಬೇಕು.

'ನೀವು ಅನ್ಯಥಾ ಭಾವಿಸದಿದ್ದರೆ ನಾನು ನಿಮ್ಮ ಮನೆಗೆ ಬರಲು ಬಯಸುತ್ತೇನೆ', ಅದೊಂದು ದಿನ ವಿಶಾಲ್ ತನ್ನಿಚ್ಛೆಯನ್ನು ಹೇಳಿದ.

'ನಾನೇಕೆ ಅನ್ಯಥಾ ಭಾವಿಸಲಿ? ನೀವು ಖಂಡಿತ ನಮ್ಮ ಮನೆಗೆ ಬನ್ನಿ', ನಾನು ಅವನಿಗೆ ನನ್ನ ಮನೆಯ ವಿಳಾಸ ಹೇಳಿದೆ. ವಿಶಾಲ್ ನನ್ನ ಮನೆಗೆ ಬಂದ. ತುಂಬಾ ಹೊತ್ತು ಕೂತಿದ್ದ. ನಾವು ಅನೇಕ ವಿಷಯಗಳ ಬಗ್ಗೆ ಹರಟಿದೆವು. ಅವನ ಮಾತುಗಳು ನನಗೆ ಇಷ್ಟವಾದವು. ಖುಷಭ್ ಬೇಗನೇ ಹಾಸಿಗೆಗೆ ಬಂದಿದ್ದ. ಅವನ ಪ್ರತಿಯೊಂದು ಮಾತಿನಲ್ಲಿ ಲೈಂಗಿಕ ಪ್ರಸಂಗಗಳಿರುತ್ತಿದ್ದು, ನಾನು ಭಾವನೆಗಳಲ್ಲಿ ಹರಿದು ಹೋಗುತ್ತಿದ್ದೆ. ಆದರೆ ವಿಶಾಲ್‌ನಲ್ಲಿ ಒಂದು ಸ್ಥಿರತೆಯಿತ್ತು. ಅವನು ಅನವಶ್ಯಕವಾಗಿ ಲೈಂಗಿಕ ಪ್ರಸಂಗಗಳನ್ನು ಎತ್ತುತ್ತಿರಲಿಲ್ಲ. ಇದರಿಂದ ನನ್ನ ಮನಸ್ಸು ಸಹ ನಿಯಂತ್ರಣದಲ್ಲಿರುತ್ತಿತ್ತು. ಈ ವಾಸ್ತವಿಕತೆ ನನ್ನೆದುರು ತೆರೆದ ಪುಸ್ತಕದಂತಿದ್ದು, ಮಹಿಳೆಯಾಗಲಿ ಅಥವಾ ಪುರುಷನಾಗಲಿ ತನ್ನ ಸ್ವಾತಂತ್ರ್ಯವನ್ನು ಘೋಷಿಸಲು ತನ್ನ ಬಯಕೆಗಳನ್ನೇ ಮಾಧ್ಯಮವಾಗಿ ಆಯ್ಕೆ ಮಾಡಿಕೊಳ್ಳುತ್ತಾನೆ. ಮಹಿಳಾ ಸ್ವಾತಂತ್ರ್ಯದ ಬಗ್ಗೆ ಮಾತನಾಡುವ ಮಹಿಳೆಯರು ಸಹ ಲೈಂಗಿಕ ಸ್ವಾತಂತ್ರ್ಯಕ್ಕಾಗಿ ಧ್ವನಿ ಎತ್ತುತ್ತಾರೆ.

ಕೆಲವು ದಿನಗಳು ವಿಶಾಲನನ್ನು ಭೇಟಿಯಾಗಲು ಸಾಧ್ಯವಾಗಲಿಲ್ಲ. ಅಮ್ಮನ ಆರೋಗ್ಯ ಹದಗೆಟ್ಟಿತ್ತು, ನಾನು ಅವರ ಬಳಿಗೆ ಹೋಗಬೇಕಾಗಿತ್ತು. ಅಲ್ಲಿಂದ ಮರಳಿ ಬಂದಾಗ ಕೀರ್ತಿ ನನ್ನೊಂದಿಗಿರಲು ಬಂದಳು. ಅವಳು ಸಾಗರದಲ್ಲಿ ಓಡಾಡಲು ಇಚ್ಛಿಸುತ್ತಿದ್ದಳು. ನಾನು ಅವಳನ್ನು ಮಂದಿರಗಳು, ಮಸೀದಿಗಳು, ವಿಶ್ವವಿದ್ಯಾಲಯ ಮುಂತಾದ ಸ್ಥಳಗಳಿಗೆ ಕರೆದುಕೊಂಡು ಹೋದೆ. ನಾವು ಸಾಕಷ್ಟು ಚಾಟ್‌ಮಸಾಲೆ ತಿನಿಸುಗಳನ್ನು ತಿಂದೆವು. ಆ ನಾಲ್ಕು ದಿನಗಳನ್ನು ನಾವಿಬ್ಬರು ಸ್ನೇಹಿತೆಯರಂತೆ ಕಳೆದೆವು. ನಾನು ಅವಳಿಗೆ ರಿತಿಕ್ ಮತ್ತು ಖುಷಭ್ ಬಗ್ಗೆ ಸಹ ಹೇಳಿದೆ. ಅವಳಲ್ಲಿ ಏಕೆ ಮುಚ್ಚುಮರೆ?

'ಸುಗಂಧಾ, ಇದೆಲ್ಲಾ ಸರಿಯಲ್ಲ' ಅವರಿಬ್ಬರ ಬಗ್ಗೆ ಕೇಳಿ ಕೀರ್ತಿ ಹೇಳಿದಳು.

'ಇದರಲ್ಲಿ ತಪ್ಪೇನಿದೆ?'

'ನೀನು ನಿನ್ನೊಂದಿಗೆ ಹುಡುಗಾಟ ಆಡ್ತಿದ್ದೀಯ', ಕೀರ್ತಿ ಅಮ್ಮನಂತೆ ಹೇಳಿದಳು.

'ನನಗೆ ಸೂಕ್ತ ವ್ಯಕ್ತಿ ಸಿಗದಿರುವಾಗ ನಾನೇನು ಮಾಡಲಿ? ಇದರಲ್ಲಿ ನನ್ನ ದೋಷವೇನಿದೆ, ಹೇಳು?' ಕೇಳಿದೆ.

'ನಿನ್ನ ದೋಷವಿಲ್ಲ, ಆದರೂ ಜಗತ್ತು ನಿನ್ನನ್ನೇ ದೂಷಿಸುತ್ತದೆ. ನಿನ್ನನ್ನು ಪೋಕರಿ, ಕೆಟ್ಟ ನಡತೆಯವಳು ಮುಂತಾದ ಶಬ್ದಗಳಿಂದ ಅಲಂಕಾರ ಮಾಡುತ್ತದೆ'.

'ನಿನಗೂ ನಿನ್ನ ಪತಿಯನ್ನು ಹೊರತುಪಡಿಸಿ ಬೇರೆ ಸಂಬಂಧಗಳಿವೆ...' ನನ್ನ ಬಾಯಿಯಿಂದ ಈ ಮಾತು ಅನಾಯಾಸವಾಗಿ ಹೊರಟಿತು. ನಾನು ಕೂಡಲೇ ನನ್ನ ನಾಲಿಗೆಯನ್ನು ಕಚ್ಚಿಕೊಂಡೆ.

'ಹೌದು, ಇದೆ. ಆದರೆ ಸದಾಶಿವ್ ನನ್ನೊಂದಿಗಿದ್ದಾನೆ. ಅವನಿಗೆ ಎಲ್ಲವೂ ತಿಳಿದಿದೆ. ಅವನಿಗೆ ಅನೇಕ ಗುತ್ತಿಗೆಗಳು ನನ್ನ ಸಂಬಂಧದಿಂದಾಗಿಯೇ ಸಿಕ್ಕಿವೆ... ಆದ್ರೆ ಅವನೆದುರು ನನ್ನ ಬಗ್ಗೆ ಬೆರಳು ತೋರಿಸುವ ಧೈರ್ಯ ಯಾರಿಗಿದೆ? ಸದಾಶಿವ ನನ್ನ ಒಬ್ಬ ಸ್ಥಿರ ಪುರುಷನಾಗಿದ್ದು, ಅವನು ನನ್ನ ಅಸ್ಥಿರ ಸಂಬಂಧಗಳನ್ನು ಮುಚ್ಚಿಡುತ್ತಾನೆ...' ಕೀರ್ತಿ ಉಸಿರಾಡಲು ಸಮಯ ತೆಗೆದುಕೊಂಡಳು.

'ಸಾರಿ, ನಾನಿದನ್ನು ಹೇಳಬಾರದಿತ್ತು', ನಾನು ಕ್ಷಮೆ ಯಾಚಿಸಿದೆ.

'ಇಲ್ಲ, ನೀನು ಈ ಪ್ರಸಂಗವನ್ನು ಹೇಳಿ ಒಳ್ಳೆಯದನ್ನು ಮಾಡಿದೆ. ಈಗ ನಾನು ಮನಬಿಚ್ಚಿ ಮಾತನಾಡುತ್ತಿದ್ದೇನೆ, ಪತಿ ಎಂಬ ಪುರುಷ ಜೊತೆಗಿದ್ದಾಗ ಕಾನೂನು ಬಾಹಿರ ಸಂಬಂಧಗಳು ಸಹ ಕಾನೂನು ಬದ್ಧವಾಗುತ್ತವೆ. 'ಇಂಥವನು' ನನ್ನ ಮಿತ್ರನೆಂದು ಸದಾಶಿವ ಬೂಟಾಟಿಕೆ ಮಾಡುತ್ತಾನೆ. 'ಆ ವ್ಯಕ್ತಿ' ಸದಾಶಿವನನ್ನು ಭೇಟಿಯಾಗಲು ಬರುತ್ತಾನೆ, ಆದ್ರೆ ಅವನು ನನ್ನ ಜೊತೆ ಮಲಗಲು ಬರ್ತಾನೆ. ನನಗೆ ಸದಾಶಿವನ ಬಗ್ಗೆ ಯಾವುದೇ ದೂರಿಲ್ಲ, ಅವನು ಪರಿಸ್ಥಿತಿ ಏನು ಮಾಡಿಸುವುದೋ ಅದನ್ನೇ ಮಾಡಿದ್ದಾನೆ... ಅವನು ಮುಂದೆ ಬರದೆ, ಹಿಂದಕ್ಕೆ ಉಳಿಯುತ್ತಾನೆ. ಆ ಅವಸ್ಥೆಯಲ್ಲಿ ನಮ್ಮ ಬಳಿ ಅನುಕೂಲತೆಗಳು ಇರಲಿಲ್ಲ, ಆದರೆ ಇಂದು ಎಲ್ಲಾ ಅನುಕೂಲಗಳಿವೆ. ನಮಗೆ ಯಾವುದು ಸುಲಭವೆಂದು ಕಂಡಿತೋ, ಅದನ್ನೇ ನಾವು ಆಯ್ಕೆ ಮಾಡಿಕೊಂಡೆವು'. ಕೀರ್ತಿ ವಾಸ್ತವವಾಗಿಯೂ ತನ್ನ ಬಗ್ಗೆ ಮನ ಬಿಚ್ಚಿ ಹೇಳಿದಳು. ನಾನೂ ಸಹ ಅವಳ ಬಗ್ಗೆ ಬೇರೆಯವರಿಂದ ಇದನ್ನೆಲ್ಲಾ ಕೇಳಿದ್ದೆ.

'ಎಲ್ಲರೂ ಸದಾಶಿವರಂತೆ ಉದಾರ ಮನಸ್ಸನ್ನು ಹೊಂದಿರುವ ಅವಶ್ಯಕತೆಯಿಲ್ಲ', ನಾನು ತರ್ಕಿಸಿದೆ.

'ಹೌದು, ಇದು ಅವಶ್ಯಕತೆಯಲ್ಲ, ಆದರೆ ಒಂದು ವೇಳೆ ಒಬ್ಬ ಪುರುಷನಿಂದ ಸಂತೃಪ್ತಿ ಸಿಕ್ಕರೆ ಬೇರೆ ಸಂಬಂಧಗಳನ್ನು ಮಾಡಿಕೊಳ್ಳುವ ಅವಶ್ಯಕತೆಯಿಲ್ಲ', ಕೀರ್ತಿ ತಿಳಿಯಪಡಿಸಿದಳು.

'ಈಗ ನನ್ನನ್ನು ಯಾರು ಮದುವೆಯಾಗ್ತಾರೆ? ನನ್ನ ಸಂಬಂಧಗಳು ಅಡ್ಡಿ ಬರುತ್ತವೆ. ಆರಂಭದಲ್ಲಿ ಅಲ್ಲದಿದ್ದರೂ, ನಂತರದಲ್ಲಿ ಜಗಳ ಆರಂಭವಾಗುತ್ತದೆ' ಎಂದೆ.

'ಹೌದು, ಆಗಬಹುದು. ಆದ್ರೆ ಇದರಿಂದ ಪಾರು ಸಹ ಆಗಬಹುದು'.

'ಹೇಗೆ?'

'ನೀನು ಮೊದಲೇ ಎಲ್ಲವನ್ನು ನಿಜ ಹೇಳಬೇಕು ಅಥವಾ ಆ ವಿಷಯಗಳಲ್ಲಿ ಲೇಶಮಾತ್ರವೂ ನಿಜಾಂಶವಿಲ್ಲ ಎಂದು ನೀನು ಗಟ್ಟಿಯಾಗಿರಬೇಕು'

'ಇದೆಲ್ಲಾ ಅಷ್ಟು ಸುಲಭವಲ್ಲ' ಎಂದೆ.

'ಹೌದು ಸುಲಭವಲ್ಲ, ಆದ್ರೆ ಒಮ್ಮೆ ರೈಲು ಹಳಿಗೆ ಬಂದರೆ ಉಳಿದ ಜೀವನ ಆರಾಮಾಗಿ ಕಳೆದು ಹೋಗುತ್ತೆ', ಕೀರ್ತಿ ವಿಶ್ವಾಸಭರಿತ ಧ್ವನಿಯಲ್ಲಿ ಹೇಳಿದಳು. ಹೇಳಲು ಕೇಳಲು ಇದು ಕೆಟ್ಟ ವಿಚಾರವಾಗಿತ್ತು. ಆದರೆ ಕೀರ್ತಿ ಈ ವಿಷಯದಲ್ಲಿ ಘನತೆಯಿಂದ ಬದುಕುತ್ತಿರುವುದು ವಾಸ್ತವವಾಗಿತ್ತು. ಅವಳ ಬಳಿ ಹಣವಿತ್ತು, ಗಂಡನಿದ್ದ, ಮಕ್ಕಳಿದ್ದರು, ನೌಕರಿಯಲ್ಲಿ ಜಂಜಾಟವಿರಲಿಲ್ಲ, ಸಮಾಜದಲ್ಲಿ ಗೌರವವಿತ್ತು, ಇದಕ್ಕಿಂತ ಹೆಚ್ಚು ಒಂದು ಹೆಣ್ಣಿಗೆ ಇನ್ನೇನು ಬೇಕು? ಆದರೆ ನಾನು ಅಂಥ ಮಹಿಳೆಯಾಗಿರಲಿಲ್ಲ ಎಂಬುದು ನನ್ನ ಸಮಸ್ಯೆಯಾಗಿತ್ತು. ಪತಿ ಎಂದು ಹೇಳಲಾಗುವ ಪುರುಷನ ಸಂಜ್ಞೆಯಂತೆ ನಾನು ಕುಣಿಯಲು ಸಿದ್ಧಳಿರಲಿಲ್ಲ.

'ಇಂಥ ಜೀವನದಲ್ಲಿ ನೀನು ಮಕ್ಕಳನ್ನು ಹೇಗೆ ಪಡೆಯಲು ಸಾಧ್ಯ? ಈ ಬಗ್ಗೆ ಎಂದಾದರೂ ಯೋಚಿಸಿದ್ದೀಯ? ಮಕ್ಕಳಿಲ್ಲದಿದ್ದರೆ ನಿನ್ನ ವೃದ್ಧಾಪ್ಯದಲ್ಲಿ ನಿನಗ್ಯಾರು ಆಸರೆಯಾಗುತ್ತಾರೆ?' ಕೀರ್ತಿ ನನ್ನನ್ನು ಹೆದರಿಸಲು ನೋಡಿದಳು.

'ಇಂದಿನ ದಿನಗಳಲ್ಲಿ ಯಾವ ಮಕ್ಕಳು ತಂದೆ ತಾಯಿಯ ವೃದ್ಧಾಪ್ಯದಲ್ಲಿ ಅವರ ಸೇವೆಯನ್ನು ಮಾಡುತ್ತಿದ್ದಾರೆ? ನೀನು ಹೊಸ ಕಾಲೊನಿಗಳ ಕಡೆಗೆ ದೃಷ್ಟಿ ಹರಿಸಿದರೆ, ಅಲ್ಲಿ ಮಕ್ಕಳು ತ್ಯಜಿಸಿದ ವೃದ್ಧ ತಂದೆ ತಾಯಿಯರೇ ಕಾಣಬರುತ್ತಾರೆ. ಅವರು ಗರ್ವದಿಂದ, ನಮ್ಮ ಮಗ ಅಮೆರಿಕದಲ್ಲಿದ್ದಾನೆ,

